

# ಹಾವು ಕಡಿತ

ಸಂಗ್ರಹ : ಸುನಯನ ವಾಲ್ಟರ್ಸ್

**ಪ**ಶ್ಚಿಮ ಡಕೋಟಾದ ಮೈದಾನ ಪ್ರದೇಶದಲ್ಲಿ ಅಂದು ಬಿಸಿಲ ಧಗೆಯಿಂದ ಉರಿಯುವ ಹವಾಮಾನವಿತ್ತು. ಮಧ್ಯಾಹ್ನದ ಹೊತ್ತು. ಎಳೆಯ ಮಗ ಮಾರ್ಕ್‌ನೊಂದಿಗೆ ತಂದೆ ಮಸ್ಸೂರಿ ನದಿಯಲ್ಲಿ ಈಜಾಡಲು ಬಯಸಿದರು. ದೇಹ-ಮನಸ್ಸುಗಳನ್ನು ತಂಪಾಗಿಸಲು ಇದೇ ಅತ್ಯುತ್ತಮ ಎಂದುಕೊಂಡವರೇ ತಂದೆ-ಮಗ ಹೊರಟೇ ಬಿಟ್ಟರು.

ಮಾರ್ಕ್ ಒಂದು ಮರದ ತುಂಡಿನ ಮೇಲೆ ಮಲಗಿ ಖುಷಿಯಿಂದ ಕಾಲುಗಳನ್ನು ಅಲುಗಾಡಿಸುತ್ತಾ ಈಜುತ್ತಿದ್ದರೆ, ತಂದೆಯು ಅವನ ಬದಿಯಿಂದಲೇ ಈಜುತ್ತಾ ಮುಂದುವರಿಯುತ್ತಿದ್ದರು. ಓಹ್! ಎಂತಹ ಆರಾಮದಾಯಕ ವಾಗಿತ್ತದು!

ಫಕ್ಕನೆ ಮಾರ್ಕ್ ಜೋರಾಗಿ ಚೀರಿಕೊಂಡನು ಮತ್ತು ಆಧಾರವಾಗಿದ್ದ ಮರದ ತುಂಡಿನಿಂದ ನೀರಿಗೆ ಬಿದ್ದನು. ಅವನು ವಿಪರೀತ ನೋವಿನಿಂದ ಬಾಧೆಪಡುವಂತಿತ್ತು. ಕೂಡಲೇ ತಂದೆಯು ಅವನನ್ನು ದಡಕ್ಕೆ ಹೊತ್ತೊಯ್ದರು. ಐದು ನಿಮಿಷದೊಳಗೆ ಮಾರ್ಕ್ ವಾಂತಿಮಾಡಲಾರಂಭಿಸಿ ವಿಪರೀತ ಸುಸ್ತಾದನು. ಪರೀಕ್ಷಿಸಿ ನೋಡಿದಾಗ, ಮಾರ್ಕ್‌ನ ನಾಲ್ಕನೆಯ ಕಾಲ್ಬೆರಳಿನ ಅಡಿಯಲ್ಲಿ ಹಾವು ಕಚ್ಚಿದ ಗುರುತು ಕಂಡಿತು. ಮಾರ್ಕ್‌ನನ್ನು ಕೂಡಲೇ ಕಾರಿನೊಳಗೆ ಮಲಗಿಸಿದ ತಂದೆಯು ತ್ವರಿತವಾಗಿ ಅವನನ್ನು ವೈದ್ಯರ ಬಳಿ ಕರೆದೊಯ್ದರು.

ತೀವ್ರ ವಿಷಯುಕ್ತವಾದ ಹಾವು ಮಾರ್ಕ್‌ನನ್ನು ಕಡಿದಿತ್ತು. ವೈದ್ಯರು ಕೂಡಲೇ ವಿಷಹಾರಕ ಚುಚ್ಚುಮದ್ದನ್ನಿತ್ತರು ಹಾಗೂ ಹುಡುಗನನ್ನು ಹೆಲಿಕಾಪ್ಟರ್‌ನಲ್ಲಿ ದೊಡ್ಡ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಹೆಚ್ಚಿನ ವಿಷಹಾರಕ ಚುಚ್ಚುಮದ್ದನ್ನು ಪ್ರಯಾಣ ಸಮಯದಲ್ಲಿ ನೀಡಬೇಕಾಯಿತು. ತಲುಪಿದ ಕೂಡಲೇ ತುರ್ತು ಶಸ್ತ್ರಚಿಕಿತ್ಸೆಯ ಮೂಲಕ ಮಾರ್ಕ್‌ನ ಬೆರಳಿಗೆ ಶುದ್ಧ ರಕ್ತ ಹರಿಯುವಂತೆ ಮಾಡಲಾಯಿತು. ಅಂತೂ ಯಾವುದೇ ಕಾಲ್ಬೆರಳಿನ ನಷ್ಟವಿಲ್ಲದೆಯೇ ಮಾರ್ಕ್ ಬದುಕಿಕೊಂಡನು. ಅವನ ಹಾವಿನ ಕಡಿತದಿಂದಾಗಿ ಮರಣಕ್ಕೆ ಬಹಳ ಸಮೀಪ ಬಂದಿದ್ದನು.

ಹಾವಿನ ಕೊಂಡಿಗಿಂತ ತೀಕ್ಷ್ಣವಾದ ಒಂದು ಕಚ್ಚುವಿಕೆಯ ಕುರಿತು ಸತ್ಯವೇದದಲ್ಲಿ ಹೇಳಿದೆ. ಅದು ಪಾಪದ ಕಚ್ಚುವಿಕೆ ಮತ್ತು ಅದರ ಫಲ ಮರಣವೇ.

*"ಮರಣವೇ ನಿನ್ನ ಜಯವೆಲ್ಲಿ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ? ಮರಣದ ಕೊಂಡಿ ಪಾಪವೇ?"* (1 ಕೊರಿಂಥ 55,56). ಹಾವಿನ ವಿಷದ ಕೊಂಡಿಯು ಚುಚ್ಚಬೇಕಾದರೆ, ಹಾವಿನ ಸಮೀಪ ಹೋಗಬೇಕು. ಆದರೆ ಪಾಪದ ಕೊಂಡಿಯು ಮಾನವರೆಲ್ಲರಿಗೂ ಚುಚ್ಚುತ್ತದೆ. ರೊಮಾಯ 3:23ರಲ್ಲಿ ಹೇಳಿದಂತೆ, *"ಹೆಚ್ಚು ಕಡಿಮೆ ಏನೂ ಇಲ್ಲ. ಎಲ್ಲರೂ ಪಾಪ ಮಾಡಿ, ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ."* ಮಾರ್ಕ್‌ಗೆ ವಿಷಹಾರಕ ಚುಚ್ಚುಮದ್ದು ಬೇಕಾಯಿತು. ಆದರೆ ಪಾಪದ ವಿಷದ ಪರಿಹಾರಕ್ಕೆ ಬೇಕಾದ ನಿವಾರಕವು ನಮ್ಮ ಆಯ್ಕೆಯಿಂದ ದೊರೆಯುತ್ತದೆ. ಪ್ರಭುವಾದ ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟು ಆತನನ್ನು ಸ್ವಂತ ರಕ್ಷಕನಾಗಿ ಸ್ವೀಕರಿಸಿದರೆ, ನಿತ್ಯಮರಣದಿಂದ ಪಾರಾಗಬಹುದು. *"ಕರ್ತನಾದ ಯೇಸುವಿನ ಮೇಲೆ ನಂಬಿಕೆ ಇಡು. ಆಗ ನೀನು ರಕ್ಷಣೆ ಹೊಂದುವಿ"* (ಅ.ಕೃ. 16:31).


## 3ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



**ಅಕ್ಷತಾ ಸಾಧು**

ಜನನ : 12-03-2008

ಶ್ರೀ ಜೆ.ಕೆ. ಸಾಧುಜಿ (ಅಜ್ಜ)

ಶ್ರೀಮತಿ ಸುಮಂಗಳ ಸಾಧುಜಿ (ಅಜ್ಜಿ)

ಮೈಸೂರು